**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 522/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಮೂರ್ತಿ ಟಿ ಆರ್ | ಸಿ.ಡಬ್ಳ್ಯು | 1 |
| ತಂದೆಯ ಹೆಸರು | : ರೇವಣ್ಣ | ಪಿ.ಡಬ್ಳ್ಯು | 1 |
| ವಯಸ್ಸು | : 50 ವರ್ಷ | | |
| ಉದ್ಯೋಗ | : ಕೂಲಿ | | |
| ವಾಸ ಸ್ಥಳ | : ವಾಸಪ್ಪ ಕಾಲೋನಿ, ತರೀಕೆರೆ. | | |

**ದಿನಾಂಕ: 12-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ಚಾಸಾ-7 ನನ್ನ ಹೆಂಡತಿ. ಚಾಸಾ-8 ನನ್ನ ಮಗಳು. ಮೃತ ತೇಜಸ ಇತನು ನನ್ನ ಮಗ ಇರುತ್ತಾನೆ. ಚಾಸಾ-2 ರಿಂದ 6, 9 ರಿಂದ 12 ಇವರುಗಳ ಪರಿಚಯ ಇರುತ್ತದೆ. ನನ್ನ ಮಗನು 17 ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದಾನೆ. ಅಪಘಾತವನ್ನು ನಾನು ಪ್ರತ್ಯೇಕ್ಷವಾಗಿ ನೋಡಿಲ್ಲ. ಜನಗಳಿಂದ ನನಗೆ ಅಪಘಾತದ ಬಗ್ಗೆ ಮಾಹಿತಿ ಸಿಕ್ಕಿದೆ. ನನ್ನ ಬೈಕನ್ನು ನಡೆಸಿಕೊಂಡು ನನ್ನ ಮಗ ಮತ್ತು ಚಾಸಾ-10 ಊಟಕ್ಕೆ ಹೋಗಬೇಕಾದರೆ ಫಾರೆಸ್ಟ್ ಆಫೀಸ್ ಎದುರಿನ ರಸ್ತೆಯಲ್ಲಿ ಅಪಘಾತ ಆಗಿದೆ ಎಂದು ನನಗೆ ಕೇಳಿ ಗೊತ್ತಾಯಿತು. ಭದ್ರಾವತಿ ಕಡೆಯಿಂದ ತರೀಕೆರೆಗೆ ಬರುತ್ತಿದ್ದ ಗೂಡ್ಸ್ ವಾಹನದಿಂದ ಅಪಘಾತ ಆಗಿದೆ ಎಂದು ಗೊತ್ತಾಯಿತು. ಅಪಘಾತಪಡಿಸಿದ ವಾಹನ ಹೇಗೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಡ್ರೈವರ್ ಹೆಸರು ರವಿಕುಮಾರ ಎಂದು ಗೊತ್ತಾಯಿತು. ನಾನು ನನ್ನ ಮಗನನ್ನು ತರೀಕೆರೆಯ ಆಸ್ಪತ್ರೆಯಲ್ಲಿ ನೋಡಿದಾಗ ವೈದ್ಯರು ಮೃತ ಪಟ್ಟಿದ್ದಾನೆ ಎಂದು ತಿಳಿಸಿದರು. ನನ್ನ ಮಗನ ಜೊತೆಗೆ ಹೋಗುತ್ತಿದ್ದ ವಿಕಾಸ ಇತನಿಗೂ ಕಾಲಿಗೆ ಪೆಟ್ಟಾಗಿರುತ್ತದೆ. ಆತನು ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾನೆ. ಪೊಲೀಸರಿಗೆ ಪಿರ್ಯಾದಿಯನ್ನು ನಾನೇ ನೀಡಿದ್ದೇನೆ. ಈಗ ತೋರಿಸುತ್ತಿರುವ ಸಹಿ ನನ್ನದೇ ಇರುತ್ತದೆ. ಪಿರ್ಯಾದಿಯನ್ನು ನಿಪಿ.1 ಸಾಕ್ಷಿ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಫೋಟೊವನ್ನು ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದಿದ್ದಾರೆ. ಪಂಚನಾಮೆಯನ್ನು ನಿಪಿ.2, ಸಹಿಯನ್ನು ನಿಪಿ.2 ಎ, ಫೋಟೊವನ್ನು ನಿಪಿ.3, ಅಮಾನತು ಪಂಚನಾಮೆಯನ್ನು ನಿಪಿ.4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು. ಭಾವ ಚಿತ್ರಗಳನ್ನು ನಿಪಿ.5 ಎಂದು ಗುರುತಿಸಲಾಯಿತು. ನನಗೆ ಎರಡು ವಾಹನಗಳ ನಂಬರುಗಳು ಹೇಳಲು ಬರುವುದಿಲ್ಲ. ನಿಪಿ.5 ರಲ್ಲಿ ತೋರಿಸಿದ ವಾಹನ ಅಪಘಾತ ಪಡಿಸಿದ ವಾಹನ ಇರುತ್ತದೆ. ಅಪಘಾತವಾದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದ್ದೇನೆ. ಚಾಸಾ-2 ಮತ್ತು 3 ಕೂಡಾ ಪಂಚನಾಮೆ ಕಾಲಕ್ಕೆ ನನ್ನ ಜೊತೆ ಹಾಜರಿದ್ದರು. ಚಾಸಾ-2 ರವರು ಈಗ ತೀರಿಕೊಂಡಿದ್ದಾರೆ. ಅಪಘಾತಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಆರೋಪಿಯ ಸ್ಥಾನದಲ್ಲಿ ಇದ್ದಾನೆ.

ಆತನನ್ನು ನನಗೆ ಠಾಣೆಯಲ್ಲಿ ಪೊಲೀಸರು ತೋರಿಸಿದ್ದಾರೆ. ಗೂಡ್ಸ್ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಕನ್ನಡ ಓದಲು ಬರೆಯಲು ಬರುತ್ತದೆ. ಅಪಘಾತ ಆಗಿದೆ ಎಂಬ ವಿಷಯ ನನಗೆ ರಾತ್ರಿ 10.45 ರ ಸುಮಾರಿಗೆ ಗೊತ್ತಾಯಿತು. ಯಾವುದೋ ಒಬ್ಬ ವ್ಯಕ್ತಿ ಮನೆಗೆ ಬಂದು ವಿಷಯ ತಿಳಿಸಿದನು. ಅಪಘಾತದ ವಿಷಯ ತಿಳಿದು ನಾನು ನೇರ ಆಸ್ಪತ್ರೆಗೆ ಹೋಗಿದ್ದೆನು. ಗೂಡ್ಸ್ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಜನ ಮಾತನಾಡುವುದು ಕೇಳಿ ನನಗೆ ಗೊತ್ತಾಯಿತು. ಈ ವಿಷಯವನ್ನು ನನಗೆ ಪೊಲೀಸರು ತಿಳಿಸಿಲ್ಲ. ನನ್ನ ಮಗನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆತನಿಗೆ 18 ವರ್ಷ ವಯಸ್ಸು ಕೂಡಾ ಆಗಿರಲಿಲ್ಲ ಎಂದರೆ ಸರಿಯಲ್ಲ. ವಾಹನ ಚಾಲನೆ ಬರದೇ ಇದ್ದರೂ ಕೂಡಾ ತಾನೇ ಅಡ್ಡಾದಿಡ್ಡಿ ವಾಹವನ್ನು ಚಲಾಯಿಸಿಕೊಂಡು ಹೋಗಿ ಯಾವುದೋ ವಾಹನಕ್ಕೆ ಡಿಕ್ಕಿಪಡಿಸಿದ್ದಾನೆ ಎಂದರೆ ಸರಿಯಲ್ಲ. ಆರೋಪಿಗೂ ಆತನ ವಾಹನಕ್ಕೂ ಮತ್ತು ಈ ಪ್ರಕರಣಕ್ಕೂ ನೇರ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಮರಣದ ಕುರಿತು ಎಂ ವಿ ಸಿ ಪ್ರಕರಣ ದಾಖಲಿಸಿದ್ದೇನೆ. ಆ ಪ್ರಕರಣಕ್ಕೆ ಅನುಕೂಲ ಆಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.2 ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅದಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ತಿಳಿಸಿದ ದಾಖಲೆಗಳಿಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ. ಅವುಗಳಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ.4 ಅನ್ನು ನನ್ನ ಸಮಕ್ಷಮ ಬರೆದಿಲ್ಲ ಮತ್ತು ಯಾವುದೇ ವಾಹನವನ್ನು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***